ಆ) ಹಾಗಿದ್ದಲ್ಲಿ, ಈ ಹಿಂದೆ ಈ ಯೋಜನೆಯನ್ನು ಸ್ಥಗಿತಗೊಳಿಸಲು ಇದ್ದ ಕಾರಣಗಳೇನು?

ಇ) ಈಗ ಮತ್ತೆ ಲಾಟರಿ ಪ್ರಾರಂಭಿಸುವುದರಿಂದ ಬಡ ಸಾರ್ವಜನಿಕರ ಮೇಲೆ ದುಷ್ಪರಿಣಾಮ ಬೀರುವುದಿಲ್ಲವೇ?

ಈ) ಹಾಗಿದ್ದಲ್ಲಿ, ಈ ಯೋಜನೆಯನ್ನು ಸರ್ಕಾರ ಪ್ರಾರಂಭಿಸಲು ಮುಂದಾಗಿರಲು ಕಾರಣಗಳೇನು?

ಶ್ರೀ ಕೆ.ಶಿವನಗೌಡ ನಾಯಕ್ (ಲೋಕ ಶಿಕ್ಷಣ, ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು) :

ಅ) ಇಲ್ಲ.

ಆ) ಸಮಾಜದ ಮತ್ತು ಬಡಜನರ ಮೇಲಾಗುತ್ತಿದ್ದ ಪ್ರತಿಕೂಲ ಪರಿಣಾಮದ ಹಿನ್ನೆಲೆಯಲ್ಲಿ ಸರ್ಕಾರವು ಅಧಿಸೂಚನೆ ಸಂಖ್ಯೆ: ಆಇ 22 ಸಉಲಾ 2006, ದಿನಾಂಕ: 27–3–2007ರಲ್ಲಿ ದಿನಾಂಕ: 01–4–2007 ರಿಂದ ಜಾರಿಗೆ ಬರುವಂತೆ ರಾಜ್ಯದಲ್ಲಿ ಎಲ್ಲಾ ತರಹದ ಲಾಟರಿ ಮಾರಾಟವನ್ನು ನಿಷೇಧಿಸುವುದರೊಂದಿಗೆ ರಾಜ್ಯವನ್ನು ಲಾಟರಿ ಮುಕ್ತ ವಲಯವೆಂದು ಘೋಷಿಸಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

875 ಶ್ರೀ ರುದ್ರೇಶಗೌಡ ವೈ.ಎನ್. (ಬೇಲೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್, ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ತಾಲ್ಲೂಕಿನಲ್ಲಿ ತೀವ್ರ ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳೆಷ್ಟು (ವಿವರ ನೀಡುವುದು);

ಆ) ಇದ್ದಲ್ಲಿ, ಶಾಶ್ವತ ಕುಡಿಯುವ ನೀರಿನ ಪೂರೈಕೆಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ;

ಇ) ಈ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರಿಗಾಗಿ ಯಗಚಿ ಜಲಾಶಯದಿಂದ ನೀರನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ (ವಿವರ ನೀಡುವುದು)?

ಕು.ಶೋಭಾ ಕರಂದ್ಲಾಜೆ(ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಬೇಲೂರು ತಾಲ್ಲೂಕಿನ 41 ಜನವಸತಿಗಳು ಕುಡಿಯುವ ನೀರಿನ ತೊಂದರೆಗೊಳಗಾಗಿವೆ.

ಆ) ಅನುಮೋದಿತ ಕ್ರಿಯಾಯೋಜನೆಯಂತೆ ನೀರು ಸರಬರಾಜು ಪ್ರಮಾಣವನ್ನು ಹೆಚ್ಚಿಸಲು ಕಾರ್ಯಸಿಂಧುತ್ವವಿರುವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಈಗಾಗಲೇ, ಯಗಚಿ ಜಲಾಶಯ ಆಧಾರಿತ ನೀರು ಸರಬರಾಜು ಯೋಜನೆ ಅನುಷ್ಠಾನದಲ್ಲಿದ್ದು, ಬೇಲೂರು ತಾಲ್ಲೂಕಿನ ಮಾರ್ಗಮಧ್ಯದ 12 ಗ್ರಾಮಗಳು ಈ ಯೋಜನೆಯಡಿ ಆವರಿಸಲ್ಪಡಲಿವೆ. ಇದಲ್ಲದೆ, ಸದ್ಯಕ್ಕೆ ಇತರೆ ಯಾವುದೇ ಯೋಜನೆ ಸರ್ಕಾರದ ಮುಂದಿರುವುದಿಲ್ಲ.

881 ಶ್ರೀ ನಾಗೇಂದ್ರ ಬಿ. (ಕೂಡ್ಲಿಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿಗೆ ಕಳೆದ ಎರಡು ವರ್ಷಗಳಿಂದ, ವಿವಿಧ ಯೋಜನೆ ಮತ್ತು ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರಸ್ತೆ ಹಾಗೂ ನೀರು ಸರಬರಾಜು ಯೋಜನೆಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು;

ಆ) ಕಳೆದ ಎರಡು ವರ್ಷಗಳಿಂದ ವಿವಿಧ ಯೋಜನೆ ಮತ್ತು ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರಸ್ತೆ ಹಾಗೂ ನೀರು ಸರಬರಾಜು ಯೋಜನೆಗೆ ತೆಗೆದುಕೊಂಡ ಕಾಮಗಾರಿಗಳು ಯಾವುವು (ಯೋಜನೆ ಮತ್ತು ಲೆಕ್ಕ ಶೀರ್ಷಿಕೆಗಳ ಪ್ರಕಾರ ಸಂಪೂರ್ಣ ವಿವರ ಒದಗಿಸುವುದು);

ಇ) ಕಳೆದ ವರ್ಷಗಳಿಂದ ತೆಗೆದುಕೊಂಡ ರಸ್ತೆ ಮತ್ತು ನೀರು ಸರಬರಾಜು ಯೋಜನೆಗಳು ಯಾವ ಹಂತದಲ್ಲಿರುತ್ತದೆ ಹಾಗೂ ಈ ಕಾಮಗಾರಿಗಳು ಪೂರ್ಣಗೊಂಡಿವೆಯೇ (ಸಂಪೂರ್ಣ ಮಾಹಿತಿ ನೀಡುವುದು)?

ಕು.ಶೋಭಾ ಕರಂದ್ಲಾಜೆ(ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಕಳೆದ 2 ವರ್ಷಗಳಲ್ಲಿ ಕುಡಿಯುವ ನೀರು ಮತ್ತು ರಸ್ತೆ ಬಾಬ್ತಿಗಾಗಿ ಕ್ರಮವಾಗಿ ಒಟ್ಟು ರೂ.7.81 ಕೋಟಿ ಮತ್ತು ರೂ.7.80 ಕೋಟಿ ಅನುದಾನ ಬಿಡುಗಡೆಯಾಗಿದೆ.

ಆ) ಕುಡಿಯುವ ನೀರಿನ ಬಾಬ್ತಿನ (ರಾಜ್ಯ ಮತ್ತು ಕೇಂದ್ರ) 4215 ಲೆಕ್ಕ ಶೀರ್ಷಿಕೆಯಡಿ 254 ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದೆ. ಅಂತೆಯೇ ರಸ್ತೆ ಬಾಬ್ತಿನ 3054 ಲೆಕ್ಕ ಶೀರ್ಷಿಕೆಯಡಿ 42 ಕಾಮಗಾರಿಗಳು, 5054 ಲೆಕ್ಕ